


### ವಾಸ್ತವ ತೆರೆದಿಟ್ಟ ಲೇಖನ

'ಮುಟ್ಟು; ಬಾಲೆಯರ ಶಿಕ್ಷಣಕ್ಕೆ ಋತುಚಕ್ರದ ಉರುಳು?' (ಮೇ 01, ಕೋಡಿಬೆಟ್ಟು ರಾಜಲಕ್ಷ್ಮಿ) ಮುಖಪುಟ ಲೇಖನ ಸಮಯೋಚಿತವಾಗಿದೆ. ಬಹಳಷ್ಟು ಗ್ರಾಮಗಳ ಸರ್ಕಾರಿ ಶಾಲೆಗಳಲ್ಲಿ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. ಹಲವು 'ಇಲ್ಲ'ಗಳ ನಡುವೆ ಮಕ್ಕಳು ಕಲಿಯುತ್ತಿದ್ದಾರೆ. ಬಹಳಷ್ಟು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಲು ಮುಖ್ಯ ಕಾರಣ ಸರ್ಕಾರಿ ಶಾಲೆಗಳ ಈ ಸ್ಥಿತಿ.

—ಮುಕ್ತಾ ಸಿ.ಎನ್.

### ಮುಕ್ತ ಚರ್ಚೆ ಮುಖ್ಯ

ಬಾಲಕಿಯರ ಶಿಕ್ಷಣದ ಸಾಪೇಕ್ಷತೆಯಲ್ಲಿ ಪ್ರಕಟಿಸಿದ ಲೇಖನ ಅತ್ಯಂತ ಸೂಕ್ತವಾಗಿದೆ. ನಾನು ವಿಜಯನಗರ ಜಿಲ್ಲೆಯ ಗದ್ದಿಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕ. ಲೇಖನ ಓದುವಾಗ ಒಂದು ಘಟನೆ ನೆನಪಾಯಿತು. ಈ ಬಾರಿ SSLC ಪರೀಕ್ಷೆಗೆ ಮೇಲ್ವಿಚಾರಕನಾಗಿ ನಿಯೋಜಿತನಾಗಿದ್ದೆ. ಪರೀಕ್ಷೆ ಪ್ರಾರಂಭವಾಗಿ ಒಂದು ಗಂಟೆ ಕಳೆಯುತ್ತಿದ್ದಂತೆ, ಒಬ್ಬ ವಿದ್ಯಾರ್ಥಿನಿ ನನ್ನ ಬಳಿ ಬಂದು, 'ಸಾರ್, ಹೊಟ್ಟೆನೋವು, ಬರೆಯಲಾಗುತ್ತಿಲ್ಲ' ಎಂದಳು. ಆಕೆಗೆ ನೀರು ಕೊಟ್ಟು ಸಮಾಧಾನಪಡಿಸಿದೆ.

15 ನಿಮಿಷಗಳ ನಂತರ ಪರೀಕ್ಷೆ ಬರೆಯಲು ಪ್ರಾರಂಭಿಸಿದಳು. ಅರ್ಧ ಗಂಟೆ ಕಳೆದ ಮೇಲೆ ಮತ್ತೆ ಅವಳಿಗೆ ಅಸ್ವಸ್ಥತೆ ಆಯಿತು. ನಾನು ಆ ಹುಡುಗಿಯನ್ನು ನೇರವಾಗಿ ಕೇಳಿದೆ, ಮುಟ್ಟಿನ ಸಮಯವೇ ಎಂದು. ಅವಳು ಮುಜುಗರದಿಂದ 'ಹೂ ಸರ್ ತುಂಬಾ ನೋವು' ಅಂದಳು. ತಕ್ಷಣ ಪರೀಕ್ಷಾ ಕೇಂದ್ರದಲ್ಲೇ ಇದ್ದ ಆರೋಗ್ಯ ಸಿಬ್ಬಂದಿ ಸಂಪರ್ಕಿಸಿ, ಪ್ರಥಮ ಚಿಕಿತ್ಸೆ ವ್ಯವಸ್ಥೆ ಮಾಡಿಸಿದೆ. ನಂತರ ಅವಳು ಪರೀಕ್ಷೆ ಮುಂದುವರಿಸಿದಳು. ಇದರಿಂದ ತಿಳಿದಿದ್ದೇನೆಂದರೆ, ಪ್ರತಿ ಶಿಕ್ಷಕರು, ಮಕ್ಕಳ ದೈಹಿಕ ಆರೋಗ್ಯ ಮತ್ತು ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಬಾಲಕಿಯರು ಮುಟ್ಟಿನ ಸಮಯದಲ್ಲಿ ಅನುಭವಿಸುವ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸಿ, ತಿಳಿವಳಿಕೆ ನೀಡಬೇಕು ಎಂದು. ಲೇಖಕರು ಈ ವಿಷಯವನ್ನು ಬಹಳ ಸೂಕ್ಷ್ಮ ಹಾಗೂ ಪ್ರಾಮಾಣಿಕವಾಗಿ ಚರ್ಚಿಸಿದ್ದಾರೆ.

—ಕೊಟ್ರೇಶ ಬಿ. ಹೊಳಗುಂದಿ, ವಿಜಯನಗರ

### ಪಾಡು- ಹಾಡು!

ಹೆಣ್ಣಿಗೇ ವಿಶಿಷ್ಟವಾದ– ಶಿಷ್ಟ ಎನಿಸದ– ಮುಟ್ಟು: ಅನೇಕ ಒಳಗುಟ್ಟುಗಳ ನೆಲೆಗಟ್ಟು; ಕಟ್ಟು'ಪಾಡು'ಗಳ ಪ್ರಪಂಚ; ಕೆಂಪು ಹಾಡು!

—ಸಿಪಿಕೆ, ಮೈಸೂರು

### ಪೋಷಕರಿಗೆ ಬೇಕಿದೆ ಮಾಹಿತಿ

'ಮುಟ್ಟು' ಎಂಬ ಪದವೇ ಪೂರ್ವಗ್ರಹ ಪೀಡಿತವಾಗಿದೆ. ಹೆಣ್ಣುಮಕ್ಕಳ ನೈಸರ್ಗಿಕ ಪ್ರಕ್ರಿಯೆಯಾದ ಮಾಸಿಕ ಋತುಚಕ್ರದ ಕುರಿತ ಮಡಿವಂತಿಕೆಯ ಅರ್ಥ ಧ್ವನಿಸುತ್ತದೆ.

ಶಾಲಾ ಶಿಕ್ಷಣ ಇಲಾಖೆಯಲ್ಲಿ ಬಾಲಕಿಯರು ಕಿಶೋರಾವಸ್ಥೆ ತಲುಪಿದಾಗ ಅವರಲ್ಲಿ ಉಂಟಾಗುವ ದೈಹಿಕ, ಮಾನಸಿಕ ಬದಲಾವಣೆಗಳು ಹಾಗೂ ಅದಕ್ಕೆ ಪೂರಕವಾಗಿ ಅವರಲ್ಲಿರಬೇಕಾದ ಮಾಹಿತಿ ಕುರಿತು ಜಾಗೃತಿ ಮೂಡಿಸುವ 'ಕಿಶೋರಿ' ಎಂಬ ತರಬೇತಿ ನೀಡಲಾಗುತ್ತಿತ್ತು. ಪ್ರತಿ ಶಾಲೆಯ ಶಿಕ್ಷಕರಿಗೆ ಈ ಕುರಿತು ತರಬೇತಿ ನೀಡಿ, ಅವರ ಮೂಲಕ ಶಾಲೆಯ ಬಾಲಕಿಯರಿಗೆ ತರಬೇತಿ ನೀಡಲಾಗುತ್ತಿತ್ತು. ಈಗಲೂ ಅನೇಕ ಶಾಲೆಗಳಲ್ಲಿ ಶಿಕ್ಷಕಿಯರು ತರಬೇತಿ ನೀಡುವ ಕಾರ್ಯ ಮಾಡುತ್ತಿದ್ದಾರೆ. ಈ ಕುರಿತು ಪೋಷಕರಿಗೆ ಮಾಹಿತಿ ನೀಡುವುದು ಸೂಕ್ತ.

—ಎಚ್.ಬಿ. ಚಂದ್ರಶೇಖರ್, ಬೆಂಗಳೂರು

### ಮಾನವ ಕುಲಕ್ಕೆ ಎಚ್ಚರಿಕೆ

'ಸೂರೆಗೊಂಡೀತೆ ನಮ್ಮ ಭವಿಷ್ಯ?' (ಮೇ 01, ಜೆ. ಬಾಲಕೃಷ್ಣ) 'ಆಹಾರ ಆರೋಗ್ಯ' ಅಂಕಣದಲ್ಲಿ ಪ್ರಕಟವಾದ ಬರಹ ಕೃತಕ ರಾಸಾಯನಿಕಗಳ ಕುರಿತು ಮಾನವ ಕುಲಕ್ಕೆ ಎಚ್ಚರಿಕೆ ನೀಡಿದೆ.

— ಜಗದೀಶ ಬಿ. ಹೊಸೂರು, ಮೈಸೂರು

### ಸುಂದರ ಚಿತ್ರಗಳು

'ಸುಧಾ' ಮುಖಪುಟ ಮತ್ತು ಕೊನೆಯ ಹಿಂಬದಿ ಪುಟದಲ್ಲಿ ಪ್ರಕಟವಾಗುವ ಫೋಟೊಗಳು ಬಹಳ ಇಷ್ಟವಾಗುತ್ತವೆ. ಪತ್ರಿಕೆ ಮನೆಗೆ ಬಂದ ಕೂಡಲೇ ಮೊದಲು ನೋಡುವುದು ಇದೇ ಪುಟಗಳನ್ನು. ಸುಂದರ ಚಿತ್ರಗಳನ್ನು ಪ್ರಕಟಿಸುವ 'ಸುಧಾ'ಗೆ ಧನ್ಯವಾದ.

—ಖಂಡಪರಶು ಮಾಗಡಿ

### ಸಾಹಸವೇ ಸರಿ

'ಚಿಂತಾಮಣಿ ಕೈಲಾಸಗಿರಿ' (ಮೇ 01, ನಿರಂಜನ ವಾನಳ್ಳಿ) ಲೇಖನ ಚೆನ್ನಾಗಿದೆ. ಬೃಹತ್ ಬಂಡೆ ಕೊರೆದು ದೇವಾಲಯಗಳ ಸಂಕೀರ್ಣ ನಿರ್ಮಿಸಿರುವುದು ಸಾಹಸವೇ ಸರಿ! ಇಲ್ಲಿಗೆ ಅತಿ ಸಮೀಪದ ವಡ್ಡಹಳ್ಳಿ ಅನಂತಪದ್ಮನಾಭಸ್ವಾಮಿ ದೇವಾಲಯವೂ ಪ್ರೇಕ್ಷಣೀಯ ಸ್ಥಳ.

—ಶೋಭಾ ಸಂಪತ್, ಬೆಂಗಳೂರು

### ವಿರೋಧಾಭಾಸಗಳ ನಡುವಿನ ಬದುಕು



'ಅಳುವ ಕಡಲೊಳು ತೇಲಿ ಬರುತಲಿದೆ...' (ಮೇ 01, ರವಿ ಚಂದರ್) ಪ್ರಬಂಧ ಅದ್ಭುತವಾಗಿದೆ. ಮೂರು ಭಿನ್ನ ಸಂಗತಿಗಳನ್ನಿಟ್ಟುಕೊಂಡು ಪ್ರಕೃತಿಯ ಜಟಿಲತೆಗಳು, ವಿರೋಧಾಭಾಸಗಳ ಬಗ್ಗೆ ಹೇಳುತ್ತಾ ರಚಿಸಲಾದ ಶೈಲಿ ಹೃದಯಸ್ಪರ್ಶಿಯಾಗಿದೆ. ನಿಸರ್ಗದ ಸೃಷ್ಟಿಯ ಸೂಕ್ಷ್ಮತೆಗಳು, ವಿರೋಧಾಭಾಸಗಳು ಮನಸ್ಸನ್ನು ಆವರಿಸುವಂತಿವೆ. ಅಡಿಗರ ಕಾವ್ಯವನ್ನು ಪ್ರಬಂಧದಲ್ಲಿ ಮಿಳಿತಗೊಳಿಸಿರುವ ರೀತಿಯೂ ಅದ್ಭುತವಾಗಿದೆ. ಜೀವನದಲ್ಲಿ 'ಬೇವು–ಬೆಲ್ಲ'ದ ಎರಡರ ಸಮ್ಮಿಶ್ರಣದ ಅಗತ್ಯವನ್ನು ಸೊಗಸಾಗಿ ಮನಗಾಣಿಸಿದ್ದಾರೆ.

—ಡಾ. ಓಂ ಪ್ರಕಾಶ್, ಬೆಂಗಳೂರು

### ಜೀವನ ದರ್ಶನ

ಜೀವನ ದರ್ಶನ ಮಾಡಿಸಿದ ಪ್ರಬಂಧ. ಇಲ್ಲಿ ಯಾವುದೇ ಕ್ರಿಯೆ ಮತ್ತು ಪ್ರಕ್ರಿಯೆಗಳಿಗೆ ಇಂಥದ್ದೇ ಕಾರಣ ಎನ್ನುವಂತಿಲ್ಲ, ಜಗದ ಆಗುಹೋಗುಗಳೆಲ್ಲ ಶಿವನಾಣತಿಯಂತೆ ಅಂತ ನಾವು ನಮ್ಮ ಇಂದಿನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೋದರೆ ಸಾಕು, ಯಾವುದಕ್ಕೂ ಅರ್ಥ ಹುಡುಕುವ ಅಗತ್ಯ ಇಲ್ಲ ಎಂದು ತುಳಸಿ ಗಿಡ, ಗುಬ್ಬಚ್ಚಿ ಕುಟುಂಬ, ಸ್ಯಾಂಕಿ ಕೆರೆಯಲ್ಲಿ ಒಣಗಿ ನಿಂತ ಎರಡು ಮರಗಳು, ಇವುಗಳ ಮೂಲಕ ಲೇಖಕರು ನೇಯ್ದಿರುವ ಪ್ರಬಂಧ, ಜೀವನಬಂಧವೂ ಹೌದು. ಪೂರಕ ಚಿತ್ರ ಒದಗಿಸಿರುವ ರಾಮಕೃಷ್ಣ ಸಿದ್ರಪಾಲ ಅವರಿಗೆ ಧನ್ಯವಾದಗಳು.

—ಮಲ್ಲಿಕಾರ್ಜುನ ಸುರಧೇನುಪುರ

### ಮುದ ನೀಡಿತು

ಮೂರು ಭಿನ್ನ ಸಂಗತಿಗಳೊಂದಿಗೆ ಜೀವನದ ವಿರೋಧಾಭಾಸಗಳನ್ನು ಸುಂದರವಾಗಿ ವಿವರಿಸಿರುವ ಲೇಖಕರಿಗೆ ಧನ್ಯವಾದ.

—ಅಹ್ಮದ್ ಹುಸೇನ್ ಪೈವಳಿಕೆ, ಕಾಸರಗೋಡು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in